# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1150**

**ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸುವ ದಿನಾಂಕ : 21/08/2025**

**ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಇಂಟರ್‌ನೆಟ್ ಮೊಬೈಲ್ ಫೋನ್ ಆನ್‌ಲೈನ್ ಮೂಲಕ ವಂಚನೆಗೊಳಗಾಗುತ್ತಿರುವವರ ಸಂಖ್ಯೆ ಪ್ರತಿದಿನ ಏರಿಕೆ ಆಗುತ್ತಿದ್ದು, ಇದಕ್ಕೆ ಅನುಸಾರವಾಗಿ ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಪ್ರತ್ಯೇಕ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಪೊಲೀಸ್ ಠಾಣೆಗಳನ್ನು ಮತ್ತು ಸಿಬ್ಬಂದಿಗಳನ್ನು ನೇಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)</td><td>ರಾಜ್ಯದಲ್ಲಿ ಇಂಟರ್‌ನೆಟ್, ಮೊಬೈಲ್ ಫೋನ್, ಆನ್‌ಲೈನ್ ಮೂಲಕ ವಂಚನೆಗೆ ಒಳಗಾಗುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಅಲ್ಲದೇ ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/177/ಪಿಓಪಿ/2024, ದಿನಾಂಕ:01/08/2025 ರಲ್ಲಿ, ರಾಜ್ಯದ 43 CEN ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳೆಂದು (Cyber Crime Police Station) ಎಂದು ಮರುಪದನಾಮೀಕರಿಸಿ ಆದೇಶಿಸಿದೆ. ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿ Information Technology Act -2000 IPC/BNS ಅಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ದಾಖಲಿಸಲು ಹಾಗೂ ತನಿಖೆ ಕೈಗೊಳ್ಳಲು ಅಧಿಕಾರ ನೀಡಿ, ವ್ಯಾಪ್ತಿ ನಿಗದಿಪಡಿಸಿ ಅಧಿಸೂಚಿಸಲಾಗಿದೆ.<br><br>ಸೈಬರ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕೆಳಕಂಡಂತೆ ಘಟಕ ಹಾಗೂ ಠಾಣೆಗಳಿಗೆ ಅಧಿಕಾರಿ/ಸಿಬ್ಬಂದಿಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ವಿವರ ಈ ಕೆಳಕಂಡಂತಿದೆ:
<table>
<tr><th>ರಾಜ್ಯದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆ ಗಳ (CCPS)ಸಂಖ್ಯೆ</th><th>DySP</th><th>PI</th><th>PSI</th><th>ASI</th><th>HC</th><th>PC</th><th>Total</th></tr>
<tr><td>43</td><td>44</td><td>44</td><td>67</td><td>97</td><td>364</td><td>580</td><td>1196</td></tr>
</table>
<table>
<tr><th>ಸಿಐಡಿಯಲ್ಲಿರುವ ವಿಶೇಷ ಸೈಬರ್ ಕ್ರೈಂ ಪೊಲೀಸ್ ಠಾಣೆ ಸಿಐಡಿ (CCPS)</th><th>SP</th><th>DySP</th><th>PI</th><th>ASI</th><th>HC</th><th>PC</th><th>Total</th></tr>
<tr><td>1</td><td>1</td><td>3</td><td>7</td><td>6</td><td>7</td><td>3</td><td>27</td></tr>
</table>
<table>
<tr><th>ಬೆಂಗಳೂರು ನಗರದಲ್ಲಿರುವ ವಿಶೇಷ ಸೈಬರ್ ಕ್ರೈಂ ಪೊಲೀಸ್ ಠಾಣೆ (CCPS)</th><th>ACP</th><th>PI</th><th>PSI</th><th>ASI</th><th>HC</th><th>PC</th><th>Total</th></tr>
<tr><td>1</td><td>1</td><td>3</td><td>6</td><td>8</td><td>19</td><td>56</td><td>93</td></tr>
</table>
</td></tr>
</table>

<table>
<tr><td></td><td></td><td>

**ಅನುಬಂಧದಲ್ಲಿ** ಪೋಲಿಸ್ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಒದಗಿಸಲಾಗಿದೆ.

1. ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.
2. ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.
3. ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಛೇರಿ ಆಗಿದ್ದು, ಇತರೆ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.

</td></tr>
<tr><td>ಆ)</td><td>ಕಳೆದ ಮೂರು ವರ್ಷಗಳಲ್ಲಿ ಇಂಟರ್ ನೆಟ್, ಮೊಬೈಲ್ ಫೋನ್, ಆನ್‌ಲೈನ್ ಬಳಸಿ ವಂಚನೆ ಮಾಡುವ (ಸೈಬರ್ ಕ್ರೈಂ) ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಈ ಪೈಕಿ ಎಷ್ಟು ಪ್ರಕರಣಗಳಿಗೆ ಕೇಸ್ ದಾಖಲಿಸಲಾಗಿದೆ; ಎಷ್ಟು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ; ಈ ಮೂಲಕ ಎಷ್ಟು ಹಣ ವಂಚಿಸಲಾಗಿದೆ; (ವರ್ಷವಾರು ವಿವರ ನೀಡುವುದು)</td><td>

ಕಳೆದ ಮೂರು ವರ್ಷಗಳಲ್ಲಿ ಇಂಟರ್‌ನೆಟ್, ಮೊಬೈಲ್ ಫೋನ್, ಆನ್‌ಲೈನ್ ಬಳಸಿ ವಂಚನೆ ಮಾಡುವ ಸೈಬರ್ ಕ್ರೈಂ ಪ್ರಕರಣ ಇತ್ಯರ್ಥಪಡಿಸಲಾದ ಹಾಗೂ ವಂಚಿಸಲಾದ ಮೊತ್ತದ ವಿವರಗಳ ಅಂಕಿ-ಅಂಶಗಳು ಈ ಕೆಳಕಂಡಂತಿವೆ:-

| **ವರ್ಷ** | **ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ** | **ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ** | **ವಂಚಿಸಲಾದ ಮೊತ್ತ (ರೂ. ಗಳಲ್ಲಿ)** |
|---|---|---|---|
| 2023 | 22253 | 6007 | 1, 287,50,89,854 |
| 2024 | 22472 | 2858 | 2, 515,48,49,720 |
| 2025 | 8620 | 399 | 861,14,02,476 |

</td></tr>
<tr><td>ಇ)</td><td>ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಸಿಬ್ಬಂದಿಗಳಿಗೆ ಬೇಕಾದ ಆಧುನಿಕ ತಂತ್ರಜ್ಞಾನದ ಪರಿಕರಗಳು ಮತ್ತು ತರಬೇತಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)</td><td>

ಹೌದು, ಗಮನಕ್ಕೆ ಬಂದಿರುತ್ತದೆ.

**ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಸಿಬ್ಬಂದಿಗಳಿಗೆ ಬೇಕಾದ ಆಧುನಿಕ ತಂತ್ರಜ್ಞಾನದ ಪರಿಕರಗಳು ಮತ್ತು ತರಬೇತಿಯ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:-**

**1. ವಿಶೇಷ ಸೈಬರ್ ಅಪರಾಧ ಪೊಲೀಸ್ ಘಟಕಗಳು ಸ್ಥಾಪನೆ**

1. ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.

</td></tr>
</table>

2. ಕರ್ನಾಟಕ ರಾಜ್ಯದಲ್ಲಿ ಪ್ರತಿ ಜಿಲ್ಲೆ/ಬೆಂಗಳೂರು ನಗರದ ವಿಭಾಗಗಳಲ್ಲಿ ಒಟ್ಟು 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಿದ್ದು, (CCPS) ಕರ್ತವ್ಯ ನಿರ್ವಹಿಸುತ್ತಿವೆ. ಡಿವೈಎಸ್ಪಿ/ಎಸಿಪಿ ರವರು ಸೈಬರ್ ಕ್ರೈಂ ಪೊಲೀಸ್ ಠಾಣೆ SHO ಆಗಿರುತ್ತಾರೆ. ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿರುತ್ತವೆ.
3. ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.
4. ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಚೇರಿ ಆಗಿದ್ದು, ಗುಪ್ತಚರ ಹಂಚಿಕೆ ಹಾಗೂ ಇತರೆ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.

**2. ಸೈಬರ್ ಫಾರೆನ್ಸಿಕ್ ಸಾಮರ್ಥ್ಯ**

1. ಡಿಜಿಟಲ್ ಫಾರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.
2. ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್‌ನಲ್ಲಿ ಮೊಬೈಲ್, ನೆಟ್‌ವರ್ಕ್, ಫಾರೆನ್ಸಿಕ್ಸ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ, Magnet AXIOM, Belkasoft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.

**3. ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ**

1. ಭಾರತೀಯ ಸೈಬರ್ ಕ್ರೈಂ ಸಂಯೋಜನಾ ಕೇಂದ್ರ (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನ ಬೆಂಬಲ ನೀಡುತ್ತದೆ.
2. CERT-In (Computer Emergency Response Team – India) ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ, ಘಟನಾವಳಿಗಳನ್ನು ನಿರ್ವಹಿಸುತ್ತದೆ.
3. Cyber Swachhata Kendra ಮಾಲ್‌ವೇರ್ ಹಾಗೂ ಬಾಟ್‌ನೆಟ್ ಸೋಂಕು ಪತ್ತೆಮಾಡಿ ತೆರವುಗೊಳಿಸಲು ಸಹಾಯ ಮಾಡುತ್ತದೆ.
4. NCIIPC (National Critical Information Infrastructure Protection Centre) ಬ್ಯಾಂಕಿಂಗ್, ಟೆಲಿಕಾಂ, ಇಂಧನ ಹಾಗೂ ರಕ್ಷಣಾ ಮೂಲಸೌಕರ್ಯವನ್ನು ರಕ್ಷಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ.

| | | |
|---|---|---|
| | | **4. ಸಾಮರ್ಥ್ಯ ವೃದ್ಧಿ ಮತ್ತು ತರಬೇತಿ**<br>1. ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕ ಅಭಿಯೋಜಕರಿಗೆ ಸೈಬರ್ ಕಾನೂನು, ಡಿಜಿಟಲ್ ತನಿಖೆ, ಎಲೆಕ್ಟ್ರಾನಿಕ್ ಸಾಕ್ಷಿಗಳ ಕಾನೂನುಬದ್ಧತೆ ಕುರಿತಂತೆ ನಿಯಮಿತ ತರಬೇತಿ ನೀಡಲಾಗುತ್ತಿದೆ.<br>2. 2024ರಲ್ಲಿ 257ಕ್ಕೂ ಹೆಚ್ಚು ಅಧಿಕಾರಿಗಳು 1,367 ಸೈಬರ್ ಫಾರೆನ್ಸಿಕ್ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ನೀಡಲಾಗುತ್ತಿದೆ.<br>3. NASSCOM, DSCI, CERT-In ಸಹಯೋಗದೊಂದಿಗೆ ವಿಶೇಷ ತರಬೇತಿ ಪಡೆಯಲಾಗುತ್ತಿದೆ.<br>4. 2019ರಲ್ಲಿ ಸ್ಥಾಪಿತ CCITR (Centre for Cybercrime Investigation Training & Research) ಡಾರ್ಕ್ ವೆಬ್, ಕ್ರಿಪ್ಟೋ ಕರೆನ್ಸಿ ಅಪರಾಧಗಳಲ್ಲಿ ಪರಿಣತಿ ತರಬೇತಿ ನೀಡಲಾಗುತ್ತಿದೆ.<br>ಅಲ್ಲದೇ, ಸೈಬರ್ ಪ್ರಕರಣಗಳ ಇತ್ಯರ್ಥಪಡಿಸಲು ಆಧುನಿಕ ತಂತ್ರಜ್ಞಾನ ಹೊಂದಿರುವ ಉಪಕರಣಗಳನ್ನು ಬಳಸಲಾಗುತ್ತಿದ್ದು, ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಸಹ ಒದಗಿಸಲಾಗಿರುತ್ತದೆ. ಸಿಐಡಿ ಕಛೇರಿಯಲ್ಲಿ ಈಗಾಗಲೇ ಸಿ.ಎಫ್.ಯು (ಸೈಬರ್ ಫಾರೆನ್ಸಿಕ್ ಯುನಿಟ್) ವಿಭಾಗವನ್ನು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿ.ಎಫ್.ಯು ವಿಭಾಗದ ಸೈಬರ್ ಲ್ಯಾಬ್‌ನಲ್ಲಿ ಆಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಬಳಸಿಕೊಂಡು ಸಿ.ಎಫ್.ಯು. ವಿಭಾಗವು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ ಪ್ರಕರಣಗಳಲ್ಲಿನ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 70 ಪಿಸಿಕ್ಯೂ 2025

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

| ಅನುಬಂಧ | | | | | | | | |
|---|---|---|---|---|---|---|---|---|
| ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಸಂಖ್ಯೆ ಮತ್ತು ನೇಮಿಸಲಾಗಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ | | | | | | | | |
| ಕ್ರ.ಸಂ | ಘಟಕ | ಪೊಲೀಸ್ ಠಾಣೆ | ಡಿವೈಎಸ್‌ಪಿ | ಪಿಐ | ಪಿಎಸ್‌ಐ | ಎಎಸ್‌ಐ | ಹೆಚ್‌ಸಿ | ಪಿಸಿ |
| 1 | ಬಾಗಲಕೋಟೆ ಜಿಲ್ಲೆ | 1 | 2 | 1 | 1 | 2 | 10 | 9 |
| 2 | ಬಳ್ಳಾರಿ ಜಿಲ್ಲೆ | 1 | 1 | 1 | 1 | 2 | 6 | 10 |
| 3 | ಬೆಳಗಾವಿ ನಗರ | 1 | 1 | 1 | 1 | 2 | 9 | 4 |
| 4 | ಬೆಳಗಾವಿ ಜಿಲ್ಲೆ | 1 | 1 | 1 | 1 | 2 | 5 | 15 |
| 5 | ಬೆಂಗಳೂರು ನಗರ | 8 | 9 | 12 | 33 | 55 | 119 | 172 |
| 6 | ಬೆಂಗಳೂರು ಜಿಲ್ಲೆ | 1 | 1 | 1 | 0 | 0 | 7 | 14 |
| 7 | ಬೀದರ್ ಜಿಲ್ಲೆ | 1 | 1 | 1 | 1 | 0 | 4 | 8 |
| 8 | ಚಾಮರಾಜನಗರ ಜಿಲ್ಲೆ | 1 | 1 | 1 | 1 | 3 | 10 | 6 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 1 | 1 | 1 | 2 | 2 | 7 | 14 |
| 10 | ಚಿಕ್ಕ ಮಗಳೂರು ಜಿಲ್ಲೆ | 1 | 1 | 0 | 1 | 2 | 10 | 11 |
| 11 | ಚಿತ್ರದುರ್ಗ ಜಿಲ್ಲೆ | 1 | 1 | 1 | 1 | 2 | 6 | 13 |
| 12 | ದಕ್ಷಿಣ ಕನ್ನಡ ಜಿಲ್ಲೆ | 1 | 1 | 0 | 1 | 1 | 7 | 11 |
| 13 | ದಾವಣಗೆರೆ ಜಿಲ್ಲೆ | 1 | 1 | 1 | 1 | 2 | 7 | 14 |
| 14 | ಧಾರವಾಡ ಜಿಲ್ಲೆ | 1 | 1 | 1 | 1 | 1 | 9 | 4 |
| 15 | ಗದಗ ಜಿಲ್ಲೆ | 1 | 1 | 1 | 0 | 1 | 7 | 12 |
| 16 | ಹಾಸನ ಜಿಲ್ಲೆ | 1 | 1 | 1 | 2 | 1 | 6 | 12 |
| 17 | ಹಾವೇರಿ ಜಿಲ್ಲೆ | 1 | 1 | 1 | 1 | 1 | 5 | 18 |
| 18 | ಹುಬ್ಬಳ್ಳಿ-ಧಾರವಾಡ ನಗರ | 1 | 1 | 1 | 1 | 2 | 10 | 21 |
| 19 | ಕೆ.ಜಿ.ಎಫ್ | 1 | 0 | 1 | 1 | 0 | 5 | 7 |
| 20 | ಕಲಬುರಗಿ ನಗರ | 1 | 1 | 1 | 0 | 1 | 3 | 20 |
| 21 | ಕಲಬುರಗಿ ಜಿಲ್ಲೆ | 1 | 1 | 1 | 1 | 1 | 5 | 10 |
| 22 | ಕರ್ನಾಟಕ ರೈಲ್ವೆಸ್ | 0 | 0 | 0 | 0 | 0 | 0 | 0 |
| 23 | ಕೊಡಗು ಮಡಿಕೇರಿ | 1 | 1 | 0 | 1 | 0 | 7 | 11 |
| 24 | ಕೋಲಾರ ಜಿಲ್ಲೆ | 1 | 1 | 1 | 1 | 0 | 4 | 5 |
| 25 | ಕೊಪ್ಪಳ ಜಿಲ್ಲೆ | 1 | 1 | 1 | 1 | 2 | 6 | 10 |
| 26 | ಮಂಡ್ಯ ಜಿಲ್ಲೆ | 1 | 1 | 1 | 2 | 0 | 9 | 18 |
| 27 | ಮಂಗಳೂರು ನಗರ | 1 | 1 | 1 | 3 | 2 | 13 | 23 |
| 28 | ಮೈಸೂರು ನಗರ | 1 | 1 | 1 | 0 | 1 | 8 | 17 |
| 29 | ಮೈಸೂರು ಜಿಲ್ಲೆ | 1 | 1 | 1 | 1 | 0 | 7 | 11 |
| 30 | ರಾಯಚೂರು ಜಿಲ್ಲೆ | 1 | 1 | 1 | 1 | 1 | 5 | 7 |
| 31 | ರಾಮನಗರ ಜಿಲ್ಲೆ | 1 | 1 | 1 | 1 | 1 | 7 | 10 |
| 32 | ಶಿವಮೊಗ್ಗ ಜಿಲ್ಲೆ | 1 | 1 | 1 | 0 | 3 | 9 | 17 |
| 33 | ತುಮಕೂರು ಜಿಲ್ಲೆ | 1 | 1 | 1 | 1 | 1 | 7 | 10 |
| 34 | ಉಡುಪಿ ಜಿಲ್ಲೆ | 1 | 1 | 1 | 1 | 1 | 9 | 10 |
| 35 | ಉತ್ತರ ಕನ್ನಡ ಕಾರವಾರ | 1 | 1 | 1 | 1 | 0 | 2 | 8 |
| 36 | ವಿಜಯನಗರ ಜಿಲ್ಲೆ | | 0 | 0 | 0 | 0 | 0 | 0 |
| 37 | ವಿಜಯಪುರ ಜಿಲ್ಲೆ | 1 | 1 | 1 | 1 | 0 | 9 | 11 |
| 38 | ಯಾದಗಿರಿ ಜಿಲ್ಲೆ | 1 | 1 | 1 | 0 | 2 | 5 | 7 |
| ಒಟ್ಟು | | 43 | 44 | 44 | 67 | 97 | 364 | 580 |